SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಲ್. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂವುಟ 29 ಸಂಚಿಕೆ 144 | ಗುರುವಾರ 7—2—46 | ಬೆಲೆ ಪ್ರತಿ 3 ಪೈ

ಶಿವಗಂಗಾ ರಾಣಿಯವರು

ಪುದುಕೋಟೆ ಜ, 30—ಶಿವಗಂಗಾ ರಾಣೀ ಸಾಹೇಬರಿಗೆ ಒಬ್ಬ ಪುತ್ರರತ್ನವು ಪೊಂಗಲು ದಿವಸ ಜನಸವಾಯಿತು. ಈ ಸಂದರ್ಭದಲ್ಲಿ ಅಂಗಡಿ ಹೇರು ವಾಜಕಟಿ ಸೆವಾರಂಭ ಪುದುಕೋಟೆಯಲ್ಲಿ ಶುಭದಿಂದ ನೆರವೇರಿತು. ಶಿವಗಂಗಾ ರಾಜರು ಅನೇಕರಿಗೆ ಬಹುಮಾನಿಸಿದರು.

ತಪ್ಪು ಭಾವನೆ

ಬೆಜವಾಡ ಫೆ. 5—ಗಾಂಧೀಜಿಯು ದಕ್ಷಿಣ ಭಾರತಕ್ಕೆ ಬೇಟಿಕೊಟ್ಟು ಸಿ. ಆರ್. ರನ್ನು ಮುಂದಿನ ಮದರಾಸಿನ ಮಹಾ ಪ್ರಧಾನಿನನ್ನಾಗಿ ಮಾಡಲೆಂದು ಕೆಲವರು ಅಂದು ಕೊಂಡ ವಿಷಯದಲ್ಲಿ ಗಾಂಧೀಜಿ ಮರುಗಿದರು. ತಾವು ಹಿಂದೀಪ್ರಚಾರ ರಜತೋತ್ಸವ ಕಾರ್ಯಗಳ್ಲದೆ ಮತ್ತಾವ ಕಾರ್ಯಕ್ಕೂ ಒಂದಿಲ್ಲವೆಂದರು.

ಜೈಲಿನಲ್ಲಿ ಆಕ್ಕಿ ಪತ್ತೆ

ಕಲ್ಲಿಕೋಟೆ ಫೆ, 1—ಇಲ್ಲಿಯ ಸಬ್ ಜೈಲಿನ ಗಾರ್ಡ್ ರೂಮಿನಲ್ಲಿ ಅಕ್ಕಿ ಮತ್ತು ಬೇಳೆ ಶೇಖರಿಸಿದ್ದುದು ಪತ್ತೆಯಾಗಿದೆ.

ಭೇಷ್

ಶ್ರೀ ಶಾಂತಾರವರ 'ಶಾಕುಂತಲಾ' ಚಿತ್ರವು ಬೊಂಬಾಯಿನ ಸ್ವಸ್ತಿಕ್ ಮಂದಿರದಲ್ಲಿ 100 ವಾರಗಳು ನಡೆದ ನಂತರ ಅಲ್ಲಿಯ ಪ್ಲಾಜಾಮಂದಿರದಲ್ಲಿ 20 ವಾರ ನಡೆದಿದ.

ಈಜಿಪ್ಟಿನಲ್ಲಿ ಆತ್ಮಹತ್ಯೆಗಳು

ಈಜಿಪ್ಟ್ ಫೆ 4—ಗಂಡಸರಿಗಿಂತ ಹೆಂಗಸರೇ ಹೆಚ್ಚಾಗಿ ಈಜಿಪ್ಟಿನಲ್ಲಿ ಆತ್ಮಹತ್ಯ ಮಾಡಿಕೊಳ್ಳುತ್ತಿರುವರೆಂದು 1944—45 ರ ಅಂಕಿ ಅಂಶ ತಿಳಿಸುವುದೆಂದು ರೂಟರ್ ವಾರ್ತೆ. ಗೃಹ ಕಲಹ ದಿವಾಳಿತನ ಹುಚ್ಚು ಇವೇ ಮುಖ್ಯ ಕಾರಣಗಳಾವೆಯೆಂದು ಹೇಳಲಾಗಿದೆ.

ವೈಸ್ರಾಯರ ಆಗಮನ

ನಿನ್ನೆಯ ದಿವಸ ಮಧ್ಯಾಹ್ನ 23—0 ಘಂಟೆಗೆ ವೈಸರಾಯ್ ವೇವಲ್‌ರು ಯಲಹಂಕಾ ಸಿಮಾನ ನಿಲ್ದಾಣಕ್ಕೆ ಬಂದರು. ಶ್ರೀವಿಷ್ಣಪ್ಪಾಚಾರು ಅವರಿಗೆ ಸುಸ್ವಾಗತವಿತ್ತರು. ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಸುಸ್ವಾಗತವಿತ್ತರು.

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 65-8-0
ಚಿನ್ನ ತೊಲ 1 ಕ್ಕೆ	92-4-0
ಬೆಳ್ಳಿ	1-8-0

ಬೊಂಬಾಯಿನ ವಾಹನ ಮುಷ್ಕರಕ್ಕೆ ಮುಕ್ತಾಯ

ಬೊಂಬಾಯಿನ ವಾಹನ ಮುಷ್ಕರ ಮುಕ್ತಾಯ

ಬೊಂಬಾಯಿ ಫೆ, 6—ಬಸ್ ಮತ್ತು ಟ್ರಾಂ ಸರ್ವಿಸ್ಸುಗಳು ನಿನ್ನೆ ಸ್ಥಿಪಿಸಲ್ಪಟ್ಟಿದ್ದವು. ಬೊಂಬಾಯಿ ಸರಕಾರ ಟ್ರಾಂ ಕಂಪೆನಿ, ಸ್ವಾಫ್ ಯೂನಿಯನ್ ರವರಲ್ಲಿ ಒಪ್ಪಂದವಾಗಿ ಈ ದಿನ 11 ಘಂಟೆಯಿಂದ ಮತ್ತೆ ವಾಹನ ಓಡಾಟ ಪ್ರಾರಂಭವಾಯಿತು.

ಲಂಡನ್ ಫೆ, 5—ಪ್ರಪಂಚಕ್ಕೆ ಆಹಾರ ಅಭಾವವಾಗಿದ್ದು, ಭಾರತಕ್ಕೆ ಕ್ಷಾಮದ ಭೀತಿಯೂ ಇದೆಯೆಂದು ಆಹಾರ ಮಂತ್ರಿ ಸರ್ ಜಾನ್ ಸ್ಮಿತ್ಸರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು.

ಬೆಂಗಳೂರು ಫೆ, 5—ಮೈಸೂರು ಸ್ಟೇಟ್ ರೈಲ್ವೆ ಜಿ॥ ಮ್ಯಾನೇಜರ್ ಶ್ರೀ ಹೆಚ್ ರಂಗಾಚಾರ್ಯರಿಗೆ ಮೆ 16 ರ ವರೆಗೆ ರಜಾ ಕೊಡಲಾಗಿದೆಯೆಂದು ತಿಳಿಯಬಂದಿದೆ.

ದಕ್ಷಿಣ ಸಮಿತಿಯಲ್ಲಿ ಬಿಕ್ಕಟ್ಟು

ಲಂಡನ್ ಫೆ, 6—ಗ್ರೀಸಿನಲ್ಲಿ ಬ್ರಿಟಿಷ್ ಸೈನಿಕರು ಇರುವ ವಿಷಯದ ಆಂಗ್ಲೋ ರಷ್ಯಾಗಳ ಸಂಬಂಧದಲ್ಲಿ ಏನೂ ತೀರ್ಮಾನವಾಗದೆ ರಕ್ಷಣಾ ಸಮಿತಿಯಲ್ಲಿ ಬಿಕ್ಕಟ್ಟು ಉಂಟಾಗಿದೆ.

ಮದರಾಸು ಫೆ, 5—ಬಟ್ಟೆ ನಿಯಂತ್ರಣಾಜ್ಞೆಯನ್ನು ಉಲ್ಲಂಘಿಸಿದ ಅಪಾದನೆ ಮೇಲೆ 34 ಲಂಗೀ ವ್ಯಾಪಾರಿಗಳಿಗೆ ರೂ 10 ರಿಂದ ರೂ 100 ದ ವರೆಗೆ ಜುಲ್ಮಾನೆ ವಿಧಿಸಲಾಗಿದೆ.

ಮದರಾಸು ಫೆ, 5—ಕಾಂಗ್ರೆಸ್ ಸ್ಪರ್ಧಿಸಲಿರುವ ಪ್ರಾಂತಿಕ ಶಾಸನ ಸಭೆಯಲ್ಲಿರುವ 50 ಸ್ಥಾನಗಳಿಗೆ ಕಾಂಗ್ರೆಸ್‌ದರ ನಿಲ್ಲಲು 370 ಅಜಿ ಗಳು ಬಂದಿವೆ.

ಎಕ್ಸಾಕ್ಟಲಂ ಫೆ, 6—ಮಂತ್ರಿಗಳ ಸಂಬಳವನ್ನು ಹೆಚ್ಚಿಸಬೇಕೆಂಬ ಸೂಚನೆಯು ಕೊಚ್ಚಿನ್ ಶಾಸನ ಸಭೆಯಲ್ಲಿ ತಳ್ಳಿಹಾಕಲ್ಪಟ್ಟಿತು.

ನಂಜನಗೂಡಿನಲ್ಲಿ ಮಹಾರುದ್ರಹೋಮ

ತಾ॥ 10-2-46 ರಿಂದ 22-2-46 ರ ವರೆಗೆ 11 ದಿನಗಳು

ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದ ಎದುರು ಮಂಟಪದಲ್ಲಿ ನಡೆಯುವುದು. ಕಾರ್ಯಕ್ರಮ:—ಪ್ರತಿ ನಿತ್ಯವೂ ಪ್ರಾತಃಕಾಲ 8॥ ಘಂಟೆಯಿಂದ ರುದ್ರಾರ್ಜನ ಪುರಸ್ಸರ ಮಹಾರುದ್ರಹೋಮ, ಪೂರ್ಣಾಹುತಿ ಮತ್ತು ಪ್ರತ್ಯೇಕ ನವಗ್ರಹ ಹೋಮ. ಆಸ್ತಿಕ ಮಹಾಶಯರು ದಯಮಾಡಿ ದರ್ಶನ ಲಾಭ ಹೊಂದಿ, ಈಶ್ವರಾನುಗ್ರಹಕ್ಕೆ ಪಾತ್ರರಾಗಲು ಇದೊಂದು ಸಮಯ. ದೇಶ ಕ್ಷೇಮವನ್ನೇ ಮುಖ್ಯ ಧ್ಯೇಯವಾಗಿಟ್ಟು ಪ್ರಾರಂಭಿಸಿರುವ ಈ ಮಹತ್ಕಾರ್ಯವು ಶ್ರೀಮಂತರ ಉದಾರ ಸಹಾಯದಿಂದಲೇ ಯಶಸ್ವಿಯಾಗಿ ನಡೆಯಬೇಕಾಗಿದೆ.

ಬಿ. ವಿ. ಪಂಡಿತರು,
ಮಹಾರುದ್ರಹೋಮ ಸಮಿತಿ
ಪ್ರೆಸಿಡೆಂಟ್, ನಂಜನಗೂಡು

ಅಣು ಬಾಂಬು

ಮಿತ್ರ ಪಕ್ಷದ ವಿಜ್ಞಾನಿಗಳಿಂದ ನಿರ್ಮಿತವಾಗಿ, ಮಿತ್ರ ಸೈನಿಕರಿಂದ ನಾಗಸಾಕಿ ಹಿರೋಷಿಮಾ ನಗರಗಳ ಮೇಲೆ ಪ್ರಯೋಗಿಸಲ್ಪಟ್ಟ ಅಟೆಂ ಬಾಂಬುಗಳು ಜಪಾನ್ ಯುದ್ಧವನ್ನು ಇನ್ನೂ ಬೇಗ ಕೊನೆಗೊಂಡ ದಕ್ಕೆ ಮುಖ್ಯ ಕಾರಣವೆಂದು ಎಲ್ಲರೂ ಒಪ್ಪಿದ್ದಾರೆ. ಕೋಟ್ಯಾಧಿ ತರ ರೂಪಾಯಿಗಳ ವೆಚ್ಚದಿಂದ ತಯಾರಿಸಿದ ಈ ಬಾಂಬುಗಳೆಂಡನ್ನು ಏಸೆದೊಡನೆ ಯುದ್ಧ ಮುಗಿಯಬೇಕಾದರೆ ಜಪಾನಂ ಎದೆ ಕುಸಿಯುವಂತೆ ಲಕ್ಷಾಂತರ ಜನರ ಮರಣವೂ ಅಪಾರ ನಷ್ಟವೂ ಸಂಭವಿಸಿರಬೇಕು. ಕಳೆದ ಆಗಸ್ಟು ತಿಂಗಳಲ್ಲಿ ಬಿದ್ದ ಬಾಂಬುಗಳ ಉಪಟಳವು ಇನ್ನೂ ಶಮನವಾಗಿಲ್ಲವೆಂದೂ ಹೊಸ ಖಾಯಿಲೆಗಳು ತಲೆದೋರಿ, ಜನರಿಗೆ ರಕ್ಷಣೆಯಿಲ್ಲವಾಗಿ, ಕೂಡಲೆದರಿ, ಈಗಲೂ ಸಾಯುತ್ತಿರುವರೆಂದು, ವರದಿಯಾಗಿದೆ. ಹೀಗೆ ಅಪಾರವಾದ ಭಯೋತ್ಪಾದನೆಯಿಂದ ಶಾಂತಿಗೆ ಕಾರಣವಾಗಿರುವ ಈ ಪರಮಾಣು ಬಾಂಬುಗಳ ಭೌತ ನುರ್ಮಾನ್ನೂ, ರಚನಾಕ್ರಮವನ್ನೂ ತಿಳಿಯಲೆತ್ನಿಸುವುದರಿಂದ ಪರಮಾಣುಗಳಲ್ಲಿ ಅಡಗಿರುವ ಶಕ್ತಿಯನ್ನು ನಿತ್ಯಜೀವನದಲ್ಲಿ ಮಾನವನ ಹಿತಸಾಧನೆಗೆ ಉಪಯೋಗಿಸುವ ದಿನವು ಬೇಗನೆ ಒಂದುದೆಂದು ಭಾಸವಾಗುವುದು.

ಪ್ರಪಂಚದಲ್ಲಿರುವ ವಸ್ತುಗಳೆಲ್ಲವೂ 92 ಭೂತಗಳಲ್ಲಿ ಕಲವುಗಳ ಸಂಯೋಗದಿಂದ ಉಂಟಾಗಿರುವುದೆಂದು ರಸಾಯನಶಾಸ್ತ್ರಜ್ಞರು ನಿಶ್ಚಯಿಸಿದ್ದಾರೆ. ಸೃಷ್ಟಿ ಭೂತವೂ ತನ್ನ ಭೂತಪರಮಾಣುಗಳಿಂದಕೂಡಿದೆ. ಈ ಅತಿ ಸೂಕ್ಷ್ಮವಾದ ಪರಮಾಣುಗಳಕೇಂದ್ರ ಸ್ಥಾನದಲ್ಲಿನ ವಿದ್ಯುತ್ತಿನಿಂದ ಕೂಡಿದ ಬೀಜಕಣಗಳಿವೆ. ಈ ಬೀಜಕಣಗಳನ್ನು ಋಣಾಂಶಗಳು ಆವರಿಸಿಡಬಿಡದೆ ಸುತ್ತುತ್ತಿರುತ್ತವೆ. ಪರ್ಯಾಯಸದತೆದಲ್ಲಿ ಭೂತಗಳ ಸ್ಥಾನಾಂಕಕ್ಕೆ ಸಮನಾಗಿ ಬೀಜಕಣಗಳಲ್ಲಿ ಧನವಿದ್ಯುನ್ಮಾನವಿರುತ್ತದೆ. ಇದೇ ಭೂತಪರಮಾಣುಗಳಿಗೆ ಹೆಸ್ಸರುತ್ತು. ಆದರೆ ಒಂದು ಭೂತದ ಪರಮಾಣುಗಳೆಲ್ಲಾ ಸಮತೂಕದವುಗಳಾಗಿರುವುದಿಲ್ಲ. ಬೀಜಕಣದ ಧನವಿದ್ಯುನ್ಮಾನವು ಒಂದೇ ಆದರೂ ತೂಕ ವ್ಯತ್ಯಾಸದಿಂದ ಬೇರೆ ಬೇರೆ ಸಕ್ಷೇತ್ರಗಳಿರುವವು. ಬೀಜಕಣಗಳು ಧನಕಣಗಳಿಂದಲೂ ಶೂನ್ಯಕಣಗಳಿಂದಲೂ ಕೂಡಿರುವುದರಿಂದ ಶೂನ್ಯಕಣಗಳ ವ್ಯತ್ಯಾಸವೇ ಸಕ್ಷೇತ್ರಗಳಿಗೆ ಕಾರಣವಾಗುವುದು. ಧನಕಣಗಳಿಂದಲೂ ಶೂನ್ಯಕಣಗಳಿಂದ

ಲೂ ಹೊಡೆಯಲ್ಪಟ್ಟ ಪರಮಾಣುಗಳ ಸರಿನರ್ತನೆ ಹೊಂದಿ ಬೇರೆ ಪರಮಾಣುಗಳಾಗುವುವೆಂದು ಇತ್ತೀಚಿಗೆ ಕಂಡು ಹಿಡಿಯಲ್ಪಟ್ಟಿದೆ. ಈ ಶೋಧನೆಗಳು ಮುಂದುವರಿದಂತೆ ಬೀಜಕಣದ ಭೌತಶಾಸ್ತ್ರವು ಬೆಳೆದು ಪರಮಾಣು ಬಾಂಬುಗಳ ತಯಾರಿಕೆಗೆ ಕಾರಣವಾಯಿತು.

ಬೆರಿಲಿಯಂ ಭೂತ ಪರಮಾಣುಗಳ ಅರ್ಧಾನಿಲನ ಬೀಜಕಣಗಳಿಂದ ಹೊಡೆಯರೆ ಶೂನ್ಯಕಣಗಳು ಹೊಂಬೀಳುವುವೆಂದು ೧೯೩೨ ರಲ್ಲಿ ಛಾಡ್ವಿಕನು ಕಂಡು ಹಿಡಿದನು. ಇವುಗಳು ತೂಕದಲ್ಲಿ ಧನಕಣಕ್ಕೆ ಸಮವಾದರೂ ವಿದ್ಯುದ್ವೈಶಿಷ್ಟ್ಯವಿಲ್ಲದವರಿಂದ ಬೀಜಕಣಗಳನ್ನು ಪ್ರವೇಶಮಾಡಲು ಶೂನ್ಯಕಣಗಳಿಗೆ ಹೆಚ್ಚು ಅವಕಾಶವಿರುತ್ತದೆ. ಮಂದಗಾಮಿಗಳಾದ ಶೂನ್ಯಕಣಗಳು ಯುರೇನಿಯಂ ಭೂತಪರಮಾಣುಗಳನ್ನು ಒಳಹೊಕ್ಕರೆ ಕೆಲವು ಯುರೇನಿಯಂ ಬೀಜಕಣಗಳ ನಿರ್ಭೇದವಾಗುವುದೆಂದು ಹ್ಯಾಕ್ ಮತ್ತು ಸ್ಟ್ರಾಸ್ಮನ್ ಎಂಬ ವಿಜ್ಞಾನಿಗಳು ೧೯೩೯ ರಲ್ಲಿ ಕಂಡು ಹಿಡಿದರು. ಈ ಬೀಜಕಣ ನಿರ್ಭೇದವು ತೀವ್ರ ತೂಕವುಳ್ಳ ಯುರೇನಿಯಂ ಸಕ್ಷೇತ್ರದಲ್ಲಿ ಮಾತ್ರ ಸಾಧ್ಯವೆಂದು ಗೊತ್ತಾಗಿದೆ. ಈ ಸಕ್ಷೇತ್ರವನ್ನು ಬೇರ್ಪಡಿಸುವುದು ಸಾಮಾನ್ಯ ಶಾಸ್ತ್ರದೃಷ್ಟಿಯಿಂದ ಅಸಾಧ್ಯ. ಭೌತದೃಷ್ಟಿಯಿಂದ ಶ್ರಮಸಾಧ್ಯವಾದರೂ ಅಪಾರವಾದ ವೆಚ್ಚ ತಗಲುವುದು. ತೀವ್ರ ತೂಕವುಳ್ಳ ಯುರೇನಿಯಂ ಬೀಜಕಣ ನಿರ್ಭೇದದಿಂದ ಹೆಚ್ಚು ಕಡಿಮೆ ಸಮತೂಕದ ಮತ್ತೆಂಡು ಪರಮಾಣುಗಳು ತಲೆದೋರಿ ಶೂನ್ಯಕಣಗಳು ಧನಕಣಗಳು ಹೊರಚೆಲ್ಲುವುವು. ಅಲ್ಲದೆ ಅಗಾಧವಾದ ಶಕ್ತಿಯು ಹೊಂಹೊಮ್ಮುವುದು. ಸ್ವಯಂ ತೇಜೋಸಮರ್ಥವಾದ ಯುರೇನಿಯಂ ಬೀಜಕಣವು ಮೊದಲೇ ಅಸ್ಥಿರ. ಅದನ್ನು ಶೂನ್ಯಕಣವು ಒಳಹೊಕ್ಕರಂತೂ ನೀರನ್ನು ಹಸಿ ಒಡೆದಂತೆ ಎಂಡಾಗಿ ಒಡೆದು ಶಕ್ತಿ ಪ್ರಸಾರವಾಗುವುದು. ಈ ನಿರ್ಭೇದದಿಂದ ಬರುವ ಶೂನ್ಯಕಣಗಳ ಸುತ್ತಲಿರುವ ಹಲವು ಯುರೇನಿಯಂ ಪರಮಾಣುಗಳ ನಿರ್ಭೇದಕ್ಕೆ ನೆರವಾಗುತ್ತವೆ ಹೀಗಾಗುವುದರಿಂದ ಸ್ವಲ್ಪ ಯುರೇನಿಯಮ್ಮಿಗೆ ಶೂನ್ಯಕಣ ತಗುಲಿದೊಡನೆ. ಬೀಜಕಣ ನಿರ್ಭೇದದಿಂದ ಅಸ್ಫೋಟನೆ ಯುಂಟಾಗಿ ಅಪಾರವಾದ ಶಕ್ತಿ ಹೊರಬೀಳುವುದು, ಇದೇ ಪರಮಾಣುಗಳಲ್ಲಿನ ಭೌತ ತತ್ವ. ಬಾಂಬು ಸಿಡಿದ ಮೇಲಿಕೃತಕ ತೇಜೋಪ್ರವರ್ತಕ ಭೂತಕಗಳು ಸುತ್ತಮುತ್ತಲ ಪ್ರದೇಶಗಳಲ್ಲಿ ಬಹುಕಾಲವಿದ್ದು ಹೊಸವಿಧವಾದ ಉಪದ್ರವಗಳಿಗೆ ಕಾರಣವಾಗಬಹುದು. ಈ ಬಾಂಬುಗಳ ರಚನೆಗೆ ಸೇರಿದ ಮರ್ಮಗಳ ಇನ್ನೂ ಹೊರಬಿದ್ದಿಲ್ಲ ಬಾಂಬಿನ ಗಾತ್ರ ತೂಕಗಳ ವಿಚಾರದಲ್ಲಿ ಊಹಾಪೋಹಗಳಿವೆ ಬಾಂಬು ಬಿದ್ದ ಸ್ಥಳದಲ್ಲಿ ವಸ್ತುಗಳಲ್ಲೇ ಶೂನ್ಯಕಣಗಳು ಹೇಗೆ ಯಂತ್ರಿಯಂ ಭೂತಕಣವನ್ನು ಒಳ ಹೋಗುವುವೆಂದು ಗೊತ್ತಿಲ್ಲ. ಅಲ್ಲದೆ ಬಾಂಬಿನ ಮುಖ್ಯ ಭಾಗವು ಪುಟ್ಟ ಚೆಂಡು ಸುತ್ತಿದ್ದರೂ ಅಪರಿಮಿತವಾದ ಹೊದಿಕೆಯು ಹೆಚ್ಚು ತೂಕವಿದ್ದ ಬಾಂಬು ಸಿಡಿದಾಗ ಹಲವು ಮೈಲಿಗಳ ದೂರ ಸಾವುನೋವುಗಳನ್ನು ಬೀರಬಹುದು (ನಾಳೆಯ ದಿನಪತ್ರಿಕೆಯನ್ನು ನೋಡಿ)

ನಾಣ್ಣುಡಿ

ಪುತ್ರರಿಲ್ಲದಿದ್ದರೆ ಒಂದು ಕಷ್ಟ |
ಪುತ್ರರಿದ್ದರೆ ಒಂಭತ್ತು ಕಷ್ಟ ||

At Opera — From 7-2-46

ಪರಂಜ್ಯೋತಿ

(ತಮಿಳು ಚಿತ್ರ)

ವಿ ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧ್ಯದಲ್ಲಿ ಪಾತ್ರದಾರರು
ಪ್ರತಿದಿನ ಮೂರು ಆಟಗಳು

Morning Shows from 8-2-46
JohnnyDoesn't Live Here Any More

ಹಸಿ ಬಿಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

At Ranjit
2 nd Week
NAVIMA
ತಾ|| 8—2—46 ರಿಂದ
ಅಂಧೇರಾ
ANDHERA

ನಮ್ಮ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಂಗಳಲ್ಲಿ ಉಪಯೋಗಿಸಲು ಅರ್ಹವಾದುದು. ಹಿಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪೌಂಡಿನ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing
L. N. Press
Sriramp et MYSORE